

# ಯಾರಿಗೆ ಕಥೆ ಹೇಳುತ್ತಿದ್ದೇವೆ ಎಂಬುದು ಮುಖ್ಯ...

**ನಟಿ ರಂಜನಿ ರಾಘವನ್ ನಿರ್ದೇಶನದ ಚೊಚ್ಚಲ ಸಿನಿಮಾ 'ಡಿ ಡಿ ಢಿಕ್ಕಿ' ಚಿತ್ರೀಕರಣ ಪೂರ್ಣಗೊಂಡಿದ್ದು, ಬಿಡುಗಡೆಗೆ ಅಣಿಯಾಗುತ್ತಿದೆ. ಸಿನಿಮಾ ನಿರ್ದೇಶನದ ಹೊಸ ಅನುಭವವನ್ನು ಜೊತೆಯಾಗಿಸಿಕೊಂಡಿರುವ ಅವರು, 'ಸುಧಾ'ದೊಂದಿಗೆ ತಮ್ಮ ಕಲಿಕೆಗಳ ಬಗ್ಗೆ ಮಾತನಾಡಿದ್ದಾರೆ.**

■ ಎಸ್ಸೆನ್

◆ 'ಡಿ ಡಿ ಢಿಕ್ಕಿ' ಸಿನಿಮಾ ನಿರ್ದೇಶನದ ಒಟ್ಟಾರೆ ಅನುಭವ ಹೇಗಿತ್ತು?

ನನಗೆ ಪ್ರೆಗ್ನೆನ್ಸಿ ಫೀಲ್ ಗೊತ್ತಿಲ್ಲ. ಆದರೆ ಸಿನಿಮಾ ನಿರ್ದೇಶನ ಅದೇ ಭಾವದಂತೆ ಭಾಸವಾಯಿತು. ಒಂದು ಮಗುವಿಗೆ ಜನ್ಮ ಕೊಡುವ ಅನುಭವ. ದಿನಕ್ಕೊಂದೊಂದು ಭಾವ, ದಿನಕ್ಕೊಂದೊಂದು ಖುಷಿ, ಭಯ, ಆತಂಕ, ಚಿಂತೆ, ಎಲ್ಲ ವಿಷಯಗಳೂ ತಲೆಯಲ್ಲಿ ಬಂದು ಹೋಗುತ್ತಿದ್ದವು. ನಿರ್ದೇಶನ ಎಂಬುದು ಒಬ್ಬರಿಂದ ಆಗುವಂಥದ್ದಲ್ಲ. ಸುಮಾರು ವಿಷಯಗಳು ಕೂಡಿಬರಬೇಕು. ಒಳ್ಳೆಯ ಪ್ರೊಡಕ್ಷನ್, ಒಳ್ಳೆಯ ಕಲಾವಿದರು ಒಳ್ಳೆಯ ಸಮಯದಲ್ಲಿ ಸೇರಿದಾಗ ಆಗುವಂಥದ್ದು. ಅದೃಷ್ಟ, ಶ್ರಮ, ಪ್ರತಿಯೊಂದೂ ಬೇಕಾಗುತ್ತೆ. 'ಡಿ ಡಿ ಢಿಕ್ಕಿ' ನನ್ನ ವೃತ್ತಿ ಜೀವನದ ದೊಡ್ಡ ಪಯಣ.

◆ 'ಡಿ ಡಿ ಢಿಕ್ಕಿ' ಶೀರ್ಷಿಕೆ ಹಿಂದಿನ ಆಲೋಚನೆಯೇನು?

ನನಗೆ ಕನ್ನಡದಲ್ಲಿಯೇ ಶೀರ್ಷಿಕೆ ಇಡಬೇಕು ಎಂದಿತ್ತು. ಏನಾದರೂ ಹೊಸದೆನಿಸುವ, ಜೊತೆಗೆ ಎಲ್ಲರಿಗೂ ಪರಿಚಿತವಿರುವ ಪದ ಇಡಬೇಕೆನಿಸಿತ್ತು. ಯೋಗರಾಜ ಭಟ್ಟರು ಆ ರೀತಿಯ ಪ್ರಯೋಗಗಳನ್ನು ಮಾಡುತ್ತಾರೆ. ಅವರ ಲಿರಿಕ್ಸ್‌ನಲ್ಲಿ ಹೊಸ ಹೊಸ ಪದಗಳನ್ನು, ಹೊಸ ಹೊಸ ಅರ್ಥ, ಹೊಸ ಸೌಂಡಿಂಗ್‌ಗಳನ್ನು ಪರಿಚಯಿಸುತ್ತಾರೆ. ಆ ಹುಡುಕಾಟದಲ್ಲಿ ಸಿಕ್ಕಿದ್ದು 'ಡಿ ಡಿ ಢಿಕ್ಕಿ'. ಇದು ಜನರಿಗೆ ಪರಿಚಯ ಇರುವಂಥದ್ದೇ. ಕನ್ನಡದ ಮನೆಗಳಿಗೆ ಸಂಬಂಧಪಟ್ಟಿರುವ ಪದವೇ. ಸಿನಿಮಾ ಕೂಡ ಸಾಮಾಜಿಕ ಕೌಟುಂಬಿಕ ಚಿತ್ರವಾದ್ದರಿಂದ ಅದಕ್ಕೆ ತಕ್ಕ ಹೆಸರು ಎನಿಸಿತು.

◆ ಸಿನಿಮಾ ಕಲಾವಿದರ ಆಯ್ಕೆ ಕುರಿತು...

'ನೆನಪಿರಲಿ' ಪ್ರೇಮ್ ಅವರು 'ಲವ್ಲಿ ಸ್ಟಾರ್' ಆಗಿ ಕನ್ನಡದ ಜನಗಳಿಗೆ ಪರಿಚಿತರು. ಅವರ ಆ ಇಮೇಜ್ ಇಲ್ಲಿ ಮುಂದುವರೆದಂತಿದೆ. 'ಜೊತೆ ಜೊತೆಯಲಿ' ಪ್ರೇಮ್ ಅವರಿಗೆ ಮದುವೆಯಾಗಿ ಮಗು ಇದ್ದರೆ ಯಾವ ರೀತಿ ಇರಬಹುದೋ ಹಾಗೆ ಈ ಸಿನಿಮಾದಲ್ಲಿದ್ದಾರೆ. ಬೆಂಗಳೂರಿಗೆ ಎಷ್ಟೋ ಜನ ಕೆಲಸ ಹುಡುಕಿಕೊಂಡು ಬರುತ್ತಾರೆ.

## 'ಮದರ್ ಪ್ರಾಮಿಸ್' ಮೆಚ್ಚಿ ನಟಿಸಿದ ಡಾಲಿ

'ಅಣ್ಣ ಫ್ರಂ ಮೆಕ್ಸಿಕೊ', 'ಹಲಗಲಿ', '666 ಆಪರೇಷನ್ ಡ್ರೀಮ್ ಥಿಯೇಟರ್' ಸಿನಿಮಾಗಳಲ್ಲಿ ಬ್ಯುಸಿ ಇರುವ ನಡುವೆಯೇ ನಟ ಡಾಲಿ ಧನಂಜಯ್ ಮತ್ತೊಂದು ಹೊಸ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದಾರೆ. ತಮ್ಮ ಸ್ನೇಹಿತ ಪೂರ್ಣಚಂದ್ರ ಮೈಸೂರು ಅವರ ಚೊಚ್ಚಲ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಸಿನಿಮಾ ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತಿದ್ದು, ಅದರಲ್ಲಿ ಅಭಿನಯಿಸಿದ್ದಾರೆ ಕೂಡ.

ಸಿನಿಮಾಗೆ 'ಮದರ್ ಪ್ರಾಮಿಸ್' ಎಂದು ಶೀರ್ಷಿಕೆಯಿಟ್ಟಿದ್ದು, ಮುಖ್ಯಪಾತ್ರವೊಂದರಲ್ಲಿ ಡಾಲಿ ಕಾಣಿಸಿಕೊಂಡಿದ್ದಾರೆ. 'ಡಾಲಿ ಪಿಕ್ಚರ್ಸ್'ನಡಿ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಈ ಕುರಿತಂತೆ ಈಚೆಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದ ಧನಂಜಯ್, ಆರು ತಿಂಗಳ ಹಿಂದೆಯೇ ಈ ಸ್ಕ್ರಿಪ್ಟ್ ತಮ್ಮ ಬಳಿ ಬಂದಿದ್ದಾಗಿ ಹೇಳಿಕೊಂಡಿದ್ದಾರೆ. ಕಥೆ ಓದುತ್ತಿದ್ದಂತೆ ಗಮನಸೆಳೆಯುವಂತಿದ್ದು, ಸಿನಿಮಾದ ಭಾವನಾತ್ಮಕತೆ ಹಾಗೂ ನಿರೂಪಣಾ ದನಿ, ನಿರ್ಮಾಣದೊಂದಿಗೆ ನಟನೆಯನ್ನೂ ಮಾಡಬೇಕೆಂದು ಪ್ರೇರೇಪಿಸಿದೆ ಎಂದಿದ್ದಾರೆ.